ಅನುಕೂಲತೆಯೂ ತಾತ್ಸಾರಕ್ಕೆ ಒಳಗಾಗಿತ್ತು. ಒಮ್ಮೊಮ್ಮೆ ಆಗೊಮ್ಮೆ ಈಗೊಮ್ಮೆ ಎತ್ತಿನ ಬಂಡಿಗಳು ಕಾಣ ಸಿಗುತ್ತಿದ್ದದ್ದುಂಟು. ಆ ರಸ್ತೆ ಮೇಲೆ ಉದ್ದಕ್ಕೂ ನಡೆದಾಗ ಎರಡೂ ಬದಿಗೆ ಎಂದೊ ನೆಟ್ಟ ಹೊಂಗೆ ಮರದ ಸಾಲು ತಂಪು ನೀಡುತ್ತಿತ್ತು. ಇಂದು ಗಂಗೆಗೂ ಅದು ಕಣ್ಣು ತೋರಿ ಹಿತವನ್ನುಂಟು ಮಾಡಿತು. ಅಂದ ಮಾತ್ರಕ್ಕೆ ಇಂದೇನೂ ಅಂತಹ ರಣ ಬಿಸಿಲಿರಲಿಲ್ಲ. ಒಂದು ಗಳಿಗೆ ಬಿಸಿಲಾದರೆ ಮತ್ತೊಂದು ಗಳಿಗೆ ಮೋಡವೂ ಅವಳಿಗೆ ನೆರಳು ಹಾಸುತ್ತಿತ್ತು. ಕೈಹಿಡಿದು ನಡೆದುಹೋಗುತ್ತಿದ್ದ ಪಾಪು ಹೇಳಿತು,

'ಅವ್ವಾ... ಮೋಡದ ಹಿಂದೆ ಸೂರ್ಯ ನಿಂತು ಕಣ್ಣು ಮುಚ್ಚಾಲೆ ಆಡ್ತಿದಾನಲ್ವೇನವ್ವಾ...! ನೋಡು ಹ್ಯಾಂಗೆ ಮೊಡದ ಹಿಂದೆ ಮರೆಯಾಗಿ ಬಿಟ್ಟ!'

ಗಂಗೆಗೆ ಮಗಳ ಮಾತುಗಳು ಮೆಚ್ಚುಗೆಯಾದವು. ನಸು ನಕ್ಕು ಮಗುವಿನ ನೆತ್ತಿ ಸವರಿ, ಭುಜ ತಟ್ಟಿದಳು. ಅವಳ ಉತ್ತೇಜನದಿಂದ ಪ್ರೇರಿತಳಾಗಿ ಹುಮ್ಮಸ್ಸಿನಿಂದ ಆಕಾಶ ನೋಡುತ್ತ 'ಅಕಾ...! ಅತ್ಲಾಗೆ ಮ್ಯಾಲೆ ಆಕಾಶ ನೋಡೇಯವ್ವಾ...! ಸೂರ್ಯ ಮೋಡದೀಚೆ ಬಂದು, ಇಣಕ್‌ತಿದಾನ...! ಬಿಸ್ಲು ಬಂದದೆ.'

ಗಂಗೆ ನಗುತ್ತಾ ಹೇಳಿದಳು 'ಹೋಗಿ ಆ ಬಿಸ್ಲು ಹಿಡ್‌ಯವ್ವಾ... ಸೂರ್ಯ ಸೋತುಬಿಡ್ತಾನ...!' ಪಾಪೂ ಎರಡೂ ಕೈ ಎತ್ತಿ ರಸ್ತೆ ಉದ್ದ ಓಡಿದಳು. ಮತ್ತೆ ಮೋಡ ಮುಸುಕಿಬಿಟ್ಟಿತು. ನಿರಾಶಳಾಗಿ, 'ಸೂರ್ಯ ತೆಪ್ಪಿಸ್ಕೊಂಡು ಬಿಟ್ನಲ್ಲವ್ವಾ...!' ಹೇಳಿ, ನಿಂತುಬಿಟ್ಟಳು. ಮತ್ತೆ ಮೋಡ... ಮತ್ತೆ ಬಿಸಿಲು... ಈ ಮೋಡ, ಸೂರ್ಯರ ಜೂಟಾಟ ನೋಡುತ್ತಾ, ಮಾತಾಡ್ತಾ ಇದ್ದಗ ಆಗ್ಲೆ ತೋಟ ಬಂದೇಬಿಟ್ಟಿತ್ತು. ಗಂಗೆ ಹೇಳಿದಳು 'ಪೋರಿ... ತ್ವಾಟಕ್ಕೆ ಹೋಗಿ ಸ್ವಲ್ಪ ಕುಂದ್ರೋಣ...'

'ಇಲ್ಲಿ ಯಾಕೆ ಕರ್ಕೊಂಡು ಬಂದಿ ಅವ್ವಾ...?'

'ಸುಮ್ನೆ... ಅಡ್ಡಾಡಲಿಕ್ಕೆ... ಈ ತೋಟ ಹಳೇದು. ಗಿಡ ಮರ ಬೆಳ್ದು ಕಾಡಿನಂತೇ ಆಗಿಬುಟೈತಿ...'

'ಇಲ್ಲಿ ದಿಗಿಲಾಗತೈತಿಯವ್ವಾ... ಛಂದಿಲ್ಲ ಈ ಕಾಡಿನ ತೋಟ... ಹಿಂದಕ್ಕೆ ಹೋಗಿ ಬಿಡೋಣ ಬಾ...' ಎಂದು ಕೈ ಹಿಡಿದೆಳೆದಳು.

'ನಡಿ... ಸ್ವಲ್ಪ ಕೂತಿದ್ದು ಹೋಗಾನಂತೆ... ಛಂದ ಅದೆ... ಅದ್ನೋಡು... ಹಲ್ಸಿನ ಮರಾ, ಹುಣಿಸೇ ಮರ, ಸಂಪಿಗೆ ಮರ, ಬೇವಿನ ಮರ ಎಲ್ಲಾ ಅದ... ಹೂವಿನ ಗಿಡಗ್ಳೂ ಅದಾವ... ಹೂಹಾರಾ ಕಟ್ವಾಣಾ...'

'ದಾರಾ ಎಲ್ಲೈತಿ...?'

'ಅದೊ ನೋಡು. ಬಾಳೆಗಿಡಾನೂ ಐತಿ...! ನಾರು ತೆಗೆದ್ರ ಆಯ್ತು...'

'ನಂಗೂ ಹೂ ಕಟ್ಲಿಕ್ಕೆ ಬರ್‍ತೈತಿ...! ನಾ ನಾ ಕಟ್ತೇನಿ... ನೋಡ್ತಿರು...'

'ನೀ ಶಾಣೆ ಅದೀಯ ಬುಡು...' ಅಷ್ಟರಲ್ಲಿ ಪಾಪು ಸಂತೋಷದಿಂದ ಕೂಗಿ ಕೊಂಡಳು.

'ಅವ್ವಾ... ಅಲ್ನೋಡಾ.... ಅಕಾ ಅಲ್ಲೀ ದೂರ ಕಾಣೋದು ಚಾಮುಂಡಿ ಬೆಟ್ಟ ಅಲ್ವಾ...?' ತನ್ನ ನಿಡಿದಾದ ತೋಳು ಚಾಚಿ ಮೈಸೂರನ್ನು ಕಾಪಿಡುತ್ತಿರುವಂತಿದ್ದ ಬೆಟ್ಟವನ್ನು ತೋರಿ, ಮತ್ತೆ ನೆನೆಸಿಕೊಂಡಂತೆ ಹೇಳಿದಳು.

'ಅವ್ವಾ... ನಂಗೆ ಆ ರಾಕ್ಷಸ... ಮಹಿಷಾಸುರನ ಕಥಿ ಹೇಳವ್ವಾ... ಶಾಲೇಲಿ ನಂಗೆ ಹೇಳ್ಯಾರ... ಅದನ್ನ ಮತ್ತೆ ಕೇಳಿಸ್ಕಂಬೇಕೂಂತ ಆಸಿ ಆಗ್ಯೆತಿ... ಅಂವ ಇದೇ ಬೆಟ್ಟದಲ್ಲಿದ್ನಂತವ್ವಾ... ಬಾಳ ಕೆಟ್ಟ ರಾಕ್ಷಸ... ಕತ್ತಿ ತಕ್ಕೊಂಡು ಎಲ್ರನ್ನೂ ಸಾಯಿಸ್ಬಿಡ್ತಿದ್ನಂತೆ...! ನಂಗದಕ್ಕೇ ಈ ಬೆಟ್ಟ ನೋಡದ್ರೇ ಭಯ ಆಗ್ತೈತಿ... ಅವ್ನ ಫೋಟೊ ತೋರ್ಸಿದ್ರು ನಮ್ಮ ಟೀಚರ್‍ರು... ಕತ್ತಿ ಹಿಡ್ಕೊಂಡು, ಮೀಸೆ ಬಿಟ್ಕೊಂಡು, ತಲೆ ಕೆದರ್‍ಕೊಂಡು ನಿಂತ್‌ಬಿಟ್ಟ ಚಿತ್ರ ನೋಡದ್ರೇ ಭಯ ಆಗ್ತೈತಿ... ನೀನವನನ್ನ ನೋಡಿದ್ದಿ ಏನ್ವಾ...?'

'ಇಲ್ಲವ್ವಾ...'

'ಅವ್ನ ಕಥಿ ಗೊತ್ತಿದ್ಯಾ...?'

'ಇಲ್ಲ... ನಂಗೆ ತಿಳಿದು...'

'ನಂಗ್ ತಿಳಿದೈತಿ...! ಆ ರಾಕ್ಷಸನ ಮೈನಿಂದ ತೊಟ್ಟು ರಕ್ತ ನೆಲದ ಮ್ಯಾಲೆ ಬಿದ್ರೆ ನೂರು ಜನ ಅವ್ನಂತಾ ರಾಚ್ಚಸೋರು ಹುಟ್ಟಿ ಬಂದ್ಬಿಡ್ತಿದ್ರಂತ... ಬಂದು, ಮಕ್ಕಳ ನೆಲ್ಲಾ ಕಚ್ಚಿ ತಿಂದ್ಬಿಟ್ತಿದ್ರಂತ...!' ಕೊನೆಯ ಮಾತು ಅವಳ ಸ್ನೇಹಿತೆ ಹೇಳಿದ್ದಳು...! ಪಾಪು ಹೀಗೇ ಗಿಳಿ ಪಾಠ ಒಪ್ಪಿಸುವುದು ಅವಳ ಸ್ವಭಾವದ ಭಾಗವಾಗಿತ್ತು. ಕೆಲವೊಮ್ಮೆ ತೀರಾ ದಡ್ಡತನ ವ್ಯಕ್ತಪಡಿಸುವುದೂ ಇತ್ತು. ಕೆಲವೊಮ್ಮೆ ಹೀಗೆ ಬುದ್ಧಿಶಾಲಿತನದ ಪ್ರದರ್ಶನ ಅವಳಿಗಿರುತ್ತಿತ್ತು.

ಗಂಗೆ ಕುತೂಹಲ ತೋರುವಂತೆ ಕೇಳಿದಳು, 'ಆ ಮೇಲೆ ಏನಾಯ್ತುವ್ವಾ...' ಅವಳು ನಿರೀಕ್ಷಿಸಿದ ವ್ಯಕ್ತಿ ಬಾರದ ಕಳವಳವನ್ನು ಈ ಪಾಪೂನ ಕಥಾ ನಿರೂಪಣೆಯಿಂದ ಸ್ವಲ್ಪ ಮರೆತುಕೊಳ್ಳ ಬಯಸಿದಳು. ಪಾಪೂ ಹೇಳಿದಳು,

'ಆಮ್ಯಾಕೆ... ಚಾಮುಂಡೇಶ್ವರಿ ಬಂದು, ಅವರ ನಾಲಿಗೀನ ಎಲ್ಲ ಕಡೆ ಹರಡಿ ಬಿಟ್ಲಂತ... ಆಗ ರಕ್ತ ನೆಲದ ಮೇಲೆ ಬೀಳ್ಲಿಲ್ಲ... ನಾಲ್ಗಿ ಅಷ್ಟು ದೊಡ್ಡದು ಇರ್‍ತದೇನವ್ವಾ...?'

'ಹೆಂಗಸ್ರಿಗೆ ನಾಲ್ಗಿ ಉದ್ದ ಅಂತಾರಲ್ವಾ...!' ಎಂದು ಹಾಸ್ಯ ಮಾಡಿ ನಕ್ಕಳು ಗಂಗೆ.

'ಆದ್ರೆ ಆಕಿ ದೇವತೆ... ಅದಕ್ಕೆ ದೊಡ್ಡ ನಾಲಿಗೆ ಇರಬೌದು...'

'ಸರಿ, ಆ ಮೇಲೇನಾಯ್ತುವ್ವಾ..?'

'ಆಕಿ, ರಾಚಸನ್ನ ಕತ್ತಿಯಿಂದ ಹೊಡದ್ಬಿಟ್ಲು... ಅವ್ನ ರಕ್ತ ಎಲ್ಲ ನಾಲ್ಗಿ ಮ್ಯಾಗೇ ಬಿದ್ಬಿಡ್ತು... ಯಾಕೆ ಗೊತ್ತಾ...?'

'ನಾಲಿಗಿ ಹರಡಿದ್ಲಲ್ಲಾ ಚಾಮುಂಡಿ... ಹಿಂಗಾಗಿ ನಾಲ್ಗಿ ಮ್ಯಾಕೇ ಎಲ್ಲ ರಕ್ತ ಬಿತ್ತು ಅಲ್ವಾ...? ನೆಲದ ಮ್ಯಾಗೆ ಬಿದ್ದಿದ್ರ ತುಂಬಾ ಜನ ರಾಚಸ್ರು ಹುಟ್ಕೊತಿದ್ರು... ಈಗ ಅವ್ನು ಸತ್ಹೋಗಿ ಎಲ್ಲಾ ನಿಸೂರಾಯ್ತು ಅಲ್ವೇನವ್ವಾ' ಪಾಪು ಅನುಮಾನ, ಭಯದಿಂದ ಹೇಳಿತು, 'ಅಲ್ಲ ಅವ್ವಾ... ಅವ್ನ ಮಕ್ಳು ರಾಚಸರಾಗಿ ಬೆಟ್ಟದ ಮ್ಯಾಗೆ ಇರ್‍ತೋದಲ್ವಾ...? ರಾಚಸರು ಬೆಟ್ಟದಿಂದ ಇಳಿದು ಬಂದಿರೋದು ನೀನು ಕಂಡಿದೀ ಏನವ್ವಾ...? ಗಂಗೆ ಮನಸ್ಸಿನಲ್ಲಿ ಹೇಳಿಕೊಂಡಳು, 'ನಾನೂ ಒಬ್ಬ ರಾಚಸನ್ನ ಕಂಡಿವ್ನಿ...!'

ಕತೆ ಬಗ್ಗೆ ಮಾತಾಡುತ್ತಾ ಅವರಿಬ್ಬರೂ ತೋಟದ ಮಧ್ಯಭಾಗದ ಕೊಳದ ಬಳಿ ಬಂದುಬಿಟ್ಟಿದ್ದರು. ಮರಗಳ ಸಾಂದ್ರತೆಯಿಂದ ಅಲ್ಲಿ ಬಿಸಿಲು ಬೀಳದೆ ಕತ್ತಲು ಕತ್ತಲಾಗಿಯೇ ಇತ್ತು. ಪಾಪು ಹೆದರುತ್ತಾ ಹೇಳಿದಳು.

'ನೋಡು ಅವ್ವಾ... ಈ ತೋಟದಾಗೂ ರಾಚಸರು ಇರ್‍ತೋದು... ನಂಗೆ ಭಯ ಅನ್ನಿಸ್ತೈತಿ... ವಾಪಸ್ಸು ಹೋಗೂಣು ಬಾ...'

'ಇಲ್ಲವ್ವಾ... ಇಲ್ಲಿ ರಾಚಸರು ಇರೂದಿಲ್ಲ... ಅವ್ರು ಬರೋಕೆ ಈ ಕೊಳದ ದೇವತೆ ಬಿಡೂದಿಲ್ಲ... ಆಕೀಗ ಮಕ್ಕಳ ಕಂಡ್ರೆ ಪಿರೂತಿ... ಅವ್ರ ಕಾಪಾಡ್ತಾಳೆ... ಹೆದ್ರಬ್ಯಾಡ... ಬಾ, ಅಲ್ಲಿ ಹೋಗಿ ಕೂರೋಣ...' ಎಂದು ಕೊಳದ ಸಮೀಪ ಇದ್ದ ದಿಬ್ಬದ ಮೇಲೆ ಪಾಪೂ ಕೈಹಿಡಿದುಕೊಂಡು ಹೋಗಿ ಗಂಗೆ ಕುಳಿತಳು.

ಎದುರಿನ ಕೊಳದ ಮೇಲೆ ಪಾಪೂ ದೃಷ್ಟಿ ಹೋಯಿತು.

'ಯಾಕವ್ವಾ... ಕೊಳದ ನೀರು ಸೊಪ್ಪು ಅರೆದಿಟ್ಟಾಂಗೆ ಹಸೂರು ಆಗಿದೆ...? ನೀರು ಕುಡೀಬಹುದಾ...?'

'ಹಾವ್ಸೆ ತುಂಬಿ ನೀರು ಕೆಟ್ಟು ಹಸಿರು ಬಣ್ಣ ಆಗೇದೆ ಪೋರೀ... ಈ ನೀರು ಕುಡೀಲಿಕೆ ಬರೂದಿಲ್ಲ...' ಅಷ್ಟರಲ್ಲಿ ಹೆಜ್ಜೆ ಸಪ್ಪಳವಾಯಿತು. ಗಂಗೆ ಕಾದದ್ದು ಹುಸಿಯಾಗಲಿಲ್ಲವಲ್ಲಾ ಎಂದು ಗೆಲುವಾದಳು, ಮಗಳಿಗೆ ಹಾಗೇ ಹೇಳಿದಳು.

'ನೋಡವ್ವಾ... ಯಾರು ಬರ್‍ತಿದ್ದಾರೆ...?'

'ರಾಚಸನಾ...? ಬಂದ್ಬುಟ್ಟಾ...!'

ಗಂಗೆ ನಗೆಯನ್ನು ಮುಖದ ತುಂಬಾ ಹರಡಿಕೊಂಡಳು, 'ಅಲ್ಲ!... ರಾಕ್ಷಸ ಇಲ್ಲಿ ಬರಾಕೆ ಆಗೂದಿಲ್ಲ ಅಂತ ಹೇಳ್ಲಿಲ್ಲಾ...? ನಡಿ, ನೀನು ಹೋಗಿ, ಅಗೋ ಅಲ್ಲಿ... ಅಲ್ಲಿ ಹೂವುಗಳೆಲ್ಲಾ ಮಸ್ತ ಗಿಡದ ತುಂಬಾ ಇದ್ವಲ್ಲಾ... ಅದನ್ನ ಹರ್‍ಕೊಂಡ್ ಬಾವ್ವಾ... ಹಾರ ಕಟ್ಟಿ ಗುಡೀಗೆ ಒಯ್ಯಾಣ...'

'ತಿಳೀತು... ನಂಗೆ ತಿಳೀತು...! ಯಾರು ಬಂದ್ರೂ ತಿಳೀತವ್ವ... ಎದೀಮ್ಯಾಗೆ ಕೈ ಇಟ್ಟಕೊಂಡು ಪ್ರಸಾದಪ್ಪ ಬರ್‍ತಾ ಇದಾರವ್ವಾ...!'

'ಖರೇ... ನೀ ಹೇಳಾದು ಸೈ... ಈಗ ನೀನು ಹೋಗು... ಹೂವು ಆರಿಸಿ ಒಂದ್‌ಕಡೆ ಗುಡ್ಡೆ ಮಾಡಿಡು... ಶಾಣೆ ಅಲ್ವಾ...? ಹೇಳಿದ ಮಾತು ಕೇಳಬ್ಯಾಕು...' ಪಾಪು ಕುಣಿಯುತ್ತಾ ಹೋದಳು.

ಪ್ರಸಾದ ಒಂದು ಕೈ ಎದೆ ಮೇಲೆ ಇಟ್ಟುಕೊಂಡು, ಮತ್ತೊಂದು ಕೈಯಲ್ಲಿ ಯಾವುದೋ ಗಿಡದ ರಂಬೆ ಹಿಡಿದು ಬೀಸುತ್ತಾ ನಿಧಾನವಾಗಿ ಬರುತ್ತಿದ್ದ. ಗಾಳಿ ಬೀಸಿದರೆ ತೂರಿ ಹೋಗುವವನಂತೆ ಕಾಣುತ್ತಿದ್ದನವನು. ಅವನ ಆಕೃತಿ ನೋಡಿ ಗಂಗೆಗೆ ಸಂತೋಷದೊಡನೆ ಆತಂಕವೂ ಸೇರಿಕೊಂಡಿತು. ಅಂದಿನ ಸೂರ್ಯನ ಬೆಳಕಿನೊಂದಿಗೆ ಮೋಡವೂ ಬೆರತುಕೊಂಡಿದ್ದಂತೆ ಆಗಿತ್ತು ಅವಳ ಮನಸ್ಸು.

(ಸಶೇಷ)